(9) ಪೂರಾ ವೊಬಲಗು ಪಾವತಿ ಮಾಡಿದ ತಾರೀಖು ಲಾಗಾಯಿತು ಮೂರು ದಿವಸಗಳೊಳಗಾಗಿ ಈ ಕೆಳಗೆ ನಮೂದಿಸಿರುವ ಷರತ್ತುಗಳ ಮೇರಿಗೆ ನಡದುಕೊಳ್ಳತಕ್ಕ ಬಗ್ಗೆ ಒಂದು ಮುಚ್ಚಳಿಕೆಯನ್ನು ಬರದುಕೊಡಬೇಕು.

ಷರತ್ತುಗಳು.

1. ಬೇರಬೇರೆ ಸ್ಥಳಗಳಲ್ಲಿ ಚಕ್ಕೆಗಳನ್ನು ಜಮಾಯಿಸಲು ನೇಮಿಸಲ್ಪಡುವ ಸೇಸ್ಟ್ರು ಮತ್ತು ಪಿಕ್ಕಿ ಕಂಟ್ರಾಕ್ಟುದಾರುಗಳ ಹೆಸರು ನಮೂದಿನಿಂದ ಒಂದು ಪಟ್ಟಿಯನ್ನು ಕೊಡಬೇಕು.

2. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಕೊಡುವ ನಮೂನೆಯಂತೆ ಸಾಗಿಸಿದ ಚಕ್ಕೆಯ ವೊತ್ತವನ್ನು ತೋರಿಸುವ ಲೆಖ್ಕವನ್ನು ಇಡತಕ್ಕದ್ದು. ಫಾರೆಸ್ಟ್ ರೇಂಜರ್ ಮತ್ತು ಅಮಲ್ದಾರ್ರು ಯಾ ಪೋಲೀಸು ಇನ್ಸ್ಪೆಕ್ಟರು ಯಾ ಇವರ ದರ್ಜೆಗೆ ಮೇಲ್ಪಟ್ಟ ಇತರ ಆಫಿಸರ ಅಜಮಾಯಿಷಿಗೆ ಸದರೀ ಲೆಖ್ಕಗಳು ವಳಪಟ್ಟದ್ದಾಗಿರುತ್ತೆ.

3. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಏರ್ಪಡಿಸುವ ಮೇರಿಗೆ ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಚಕ್ಕೆಗೆ ಪ್ಯಾಸ್ ಪಡಿಯತಕ್ಕದ್ದು.

4. ವಾಯಿದೆ ಪೂರೈಸಿದ ನಂತರ ಜಮಾಯಿಸಿಕೊಂಡು ಶಿವಮೊಗ್ಗ ಡಿಸ್ಟ್ರಿಕ್ಟಿನ ಗಡಿ ವಳಗಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಇರತಕ್ಕ ರೈಲ್ವೆ ಸ್ಟೇಷನ್ಗಳೊಳಗಾಗಲಿ ಬಾಕಿ ಇರತಕ್ಕ ಎಲ್ಲಾ ಚಕ್ಕೆ ಮೇಲಿನ ಹಕ್ಕನ್ನು ರದ್ದು ಪಡಿಸತಕ್ಕದ್ದು.

ಮೇಲ್ಕಂಡ ಷರತ್ತಿನ ಮೇರಿಗೆ ನಡಿಯಲು ತಪ್ಪಿಹೋದಲ್ಲಿ ಇಜಾರ ರದ್ದು ಮಾಡಲ್ಪಡುವದಲ್ಲದೆ ಅದುವರಿಗೂ ಜಮಾಯಿಸಿ ಹಾಜರು ಇಟ್ಟುಕೊಂಡಿರತಕ್ಕ ವಿಶಿಷ್ಟ ಚಕ್ಕೆಯನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ. ಡೆಪ್ಯೂಟಿ ಕಮಿಷನರ ಸಾಹೇಬರವರು ನಿಷ್ಕರ್ಷಿಸುವ ಮೇರೆ ಇಜಾರದಾರನಿಂದ ವಸೂಲಾದ ಪೂರಾ ವೊಬಲಗು ಆಗಲಿ ಅಥವಾ ಆ ಪೈಕಿ ಕೆಲವು ವೊಬಲಗಾಗಲಿ ಸರಕಾರಕ್ಕೆ ಸೇರಿಸಲ್ಪಡಬಾದೀತು.

ಪಿ. ಎಸ್. ಗೋವಿಂದರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 18ನೆ ಜುಲೈ 1907.

ಮದ್ದಗಿರಿ ತಾಲ್ಲೂಕು ಮಿಡಿಗೇಸಿ ಹೋಬಳಿ ಕಾಯಂಗುತ್ತಾ ಕ್ರಿಷ್ಣಾಪುರ ಗ್ರಾಮವೆನ್ನ 1907ನೆ ಇಸವಿ 3ನೆ ಸೆಪ್ಟಂಬರ್ ತಾರೀಖಿನಲ್ಲಿ ಕ್ರಿಷ್ಣಾಪುರ ಗ್ರಾಮದಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಗ್ರಾಮವನ್ನು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿರುವ ಸಂದರ್ಭದಲ್ಲಿ ಮದ್ದಗಿರಿ ಡಿವೀಜ್ ಅಸಿಸ್ಟೆಂಟ್ ಕಮಿಷನರವರು ಇಷ್ಟಾನುಸಾರವಾಗಿ ಗ್ರಾಮವನ್ನು ಪೂರ್ತಿಯಾಗಿ ಆಗಲಿ ಅಥವಾ ವೃತ್ತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಆಗಲಿ ಹರಾಜು ಮಾಡಬಹುದು.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ವೊಬಲಿನ ಕೀಕಡಾ 25 ರೂಪಾಯಿಗಳೆನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ವೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ವೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಆಂಥಾ ಡಿಪಾಜಿಟ್ಟು ವೊಬಲಗು ಹಾಜರ್ಮಾಡಲ್ಪಡದೇ ಯಾ ಹರಾಜು ಬಾಬತು ಬಾಕಿ ವೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಗೆ ಸದರಿ ಸ್ವತ್ತು ವೊಬಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೇ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ

ಬುದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲಾ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜುದಾರರು ಸದರಿ ಸ್ವತ್ತಿನ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ॥ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟು ಆತನಿಗೆ ಕೊಡಲ್ಪಡುವದು ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯ (ಲೋಪ) ಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲ್‌ನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಭೂಮಿಯ ಸ್ವಭಾವ.	ಆಕಾರ.			ಸರಕಾರಕ್ಕೆ ಬರಬೇಕಾದ ಬಾಕೀ ಮೊಬಲಗು	ಹರಾಜು ಆಗುವ ತಾರೀಖು.	ಹರಾಜು ಆಗುವ ಸ್ಥಳ.
						ಎ.	ಗು.		ರೂ. ಆ. ಪೈ.		
ಮದ್ದಗಿರಿ	ವಿಡಿಗೇನಿ	ಕಾಯಂಗುತ್ತಾ ಕ್ರಿಷ್ಣಾಪುರ	ಸುರ್ಕಿಪ್ಪ	ಪೂರ್ತಿ ಗ್ರಾಮ.	ಖುಷ್ಕಿ	7	23	76	0 0	1906—07ನೆ ಸಾಲಿಗೆ ಜಮೆ ಖರ್ಚು	ರೂ. ಆ. ಪೈ. 71 1 0 1 0 0
					ತರಿ ...	8	15	28	0 0		
					ಬಾಗಾಯಿತು	29	33	104	0 0		
					ಪರಂಪೋಕು.	89	15	1	0 0		
					ಜುಮ್ಲಾ	206	6	209	0 0		72 1 0

ಚೆಕ್ಕು ಬಂದಿ.

ಪೂರ್ವಕ್ಕೆ—ನೀರಕಲ್ಲು.
ಪಶ್ಚಿಮಕ್ಕೆ—ಚಿನ್ನೇನಹಳ್ಳಿ.
ಉತ್ತರಕ್ಕೆ—ನೀರಕಲ್ಲು ಮತ್ತು ಚಿನ್ನೇನಹಳ್ಳಿ.
ದಕ್ಷಿಣಕ್ಕೆ—ನೀಲಿಪಳ್ಳಿ ಗ್ರಾಮ.

ಜಿಲ್ಲಾ ಸಬ್‌ನಂಬರ್. ಕೃಷ್ಣಾಪುರ.

ಎ. ವೆಂಕಟರಾವ್,
ಘಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು ನೆ ಜುಲೈ 1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ) ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ, ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಪ್ತಿದಾರರಿಗೆ ಹರಾಜು ನಿಲ್ಲುವದು.

2. ಪರಂತು ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.